**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿಃ11-10-2019**

ಮುಂದುವರಿದ ಪಾಟೀ ಸವಾಲುಃ ಶ್ರೀ ಆರ್ ಎನ್ ಕೆ ವಕೀಲರಿಂದ

ನಿ.ಪಿ. **6** ರಂತೆ **2000-01** ರಲ್ಲಿ **2** ನೇ ಪ್ರತಿವಾದಿಯ ಹೆಸರಿನಲ್ಲಿ ಮ್ಯುಟೇಷನ್ ಆಗಿದೆ ಎಂದರೆ ಸರಿ. ನಾನು ದಾಖಲಾತಿಗಳನ್ನು ಆರೋಗ್ಯ ಸರಿ ಇಲ್ಲದ ಕಾರಣ ಬೆಂಗಳೂರಿಗೆ ಹೋಗಿ ಬಂದ ನಂತರ ಪಡೆದುಕೊಂಡಿರುತ್ತೇನೆ. ನಿರ್ದಿಷ್ಟವಾಗಿ ಯಾವಾಗ ಪಡೆದುಕೊಂಡಿರುತ್ತೇನೆ ಎಂದು ಗೊತ್ತಿಲ್ಲ. ಮಹಮ್ಮದ್ ಫಾಸಿಲ್ ರವರಿಂದ **1** ಮತ್ತು **2** ನೇ ಪ್ರತಿವಾದಿಯರು ಸರ್ವೆ ನಂ. **177** ರಲ್ಲಿ **3** ಎಕರೆ **21** ಗುಂಟೆ ಜಮೀನನ್ನು ಖರೀದಿಸಿರುವ ವಿಚಾರ ನನಗೆ ಗೊತ್ತಿಲ್ಲ. ಸರ್ವೆ ನಂ. **177** ರಲ್ಲಿ ಎಷ್ಟು ಪೋಡಾಗಿದೆ ಎಂದು ನನಗೆ ಗೊತ್ತಿಲ್ಲ , ಆದರೆ **2** ಜನಕ್ಕೆ ಪೋಡಾಗಿದೆ. ನಾನು ಸರ್ವೆ ನಂ. **177/1** ಕ್ಕೆ ಸಂಬಂಧಿಸಿದಂತೆ ದಾವಾ ದಾಖಲು ಮಾಡಿರುತ್ತೇನೆ. ಸರ್ವೆ ನಂಬರ್ **177** ರಲ್ಲಿ ಮೂಲ ಮಂಜೂರಿದಾರರು ಯಾರು ಯಾರು ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಮತ್ತು ಮಹಮ್ಮದ್ ಫಾಸಿಲ್ ಎಂದು ಉತ್ತರಿಸುತ್ತಾರೆ. ಮಹಮ್ಮದ್ ಫಾಸಿಲ್ ರವರಿಗೆ ಸರ್ವೆ ನಂ. **177/2** ಪೋಡಾಗಿದೆ. ಪೋಡಾದ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಸರ್ವೆ ನಂ. **177/1** ಜಮೀನು ನನಗೆ ಮಂಜೂರಾದ ಬಗ್ಗೆ ನಾನು ಗ್ರ್ಯಾಂಟ್ ಸರ್ಟಿಫಿಕೇಟನ್ನು ಹಾಜರುಪಡಿಸಿರುತ್ತೇನೆ. ನಿ.ಪಿ. **16** ರಲ್ಲಿ ಸರ್ವೆ ನಂ. **177** ರ ಪೈಕಿ ಎಂದು ನಮೂದಾಗಿದ್ದು, ಪೋಡು ನಂಬರ್ ಇಲ್ಲ ಎಂದರೆ ಸರಿ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲಾತಿಗಳ ಬಗ್ಗೆ ತಿಳಿದುಕೊಂಡಿರುತ್ತೇನೆ. ನಿ.ಪಿ. **17** ರಲ್ಲಿ ಸರ್ವೆ ನಂ. **177/1** , ಸರ್ವೆ ನಂ. **177/2** ಮತ್ತು **175/2** ರ ಒಟ್ಟು **3** ಸ್ವತ್ತುಗಳನ್ನು ದಾನಪತ್ರ ಮಾಡಿರುತ್ತಾರೆ ಎಂದರೆ ಸರಿ. ನಿ.ಪಿ. **17** ರ **3** ನೇ ಪುಟದಲ್ಲಿ ಬಿ) ಷೆಡ್ಯೂಲ್‌ನಲ್ಲಿ ನಮೂದಿಸಿರುವ ಮೂಗಲಿ ಗ್ರಾಮದ ಸರ್ವೆ ನಂಬರ್ **177/1** (ಹಳೆ ಸರ್ವೆ ನಂ. **177/ಪೈಕಿ**) ಕಾಫಿ ಐನು ವಿಸ್ತೀರ್ಣ **3** ಎಕರೆ **21** ಗುಂಟೆ ಜಮೀನು ಬೆಳಗೋಡು ಗ್ರಾಮದ ಅಬ್ದುಲ್ ಸಮ್ಮದ್ ರವರ ಮಗ ಮಹಮ್ಮದ್ ಫಾಜಿಲ್ ಎಂಬುವವರಿಗೆ ಈ ಹಿಂದೆ ಸೇರಿದ್ದು, ಮೇಲ್ಕಂಡ ಜಮೀನು ಮಹಮ್ಮದ್ ಫಾಜಿಲ್ ರವರಿಗೆ ಸಕಲೇಶಪುರ ತಾಲ್ಲೂಕು ತಹಶೀಲ್ದಾರ್ ರವರ ಆದೇಶದ ಸಂಖ್ಯೆ ಎಲ್.ಎನ್.ಡಿ **12/76-77** ದಿನಾಂಕ **29.10.1978** ರ ಆದೇಶದಂತೆ ಈ ಹಿಂದೆ ದರಖಾಸ್ತು ಮೂಲಕ ಮಂಜೂರಾಗಿದ್ದು , ಸಕಲೇಶಪುರ ತಾಲ್ಲೂಕು, ತಹಶೀಲ್ದಾರ್ ರವರಿಂದ ದಿಃ **07.09.1979** ರಂದು ಮಹಮ್ಮದ್ ಫಾಜಿಲ್ ರವರ ಹೆಸರಿಗೆ ಸಾಗುವಳಿ ಚೀಟಿ ಸಹ ಕೊಡಲ್ಪಟ್ಟಿರುತ್ತೆ. ನಂತರ ಮಹಮ್ಮದ್ ಫಾಜಿಲ್ ರವರ ಪರವಾಗಿ ಅವರಿಂದ ಜನರಲ್ ಪವರ್ ಆಫ್ ಅಟಾರ್ನಿ ಪತ್ರದ ಮೂಲಕ ಅಧಿಕಾರ ಹೊಂದಿದ ಎಂ.ಎಸ್ ಧರ್ಮಪ್ಪ ಬಿನ್ ಎಂ.ಎ ಶಿವಪುತ್ರೇಗೌಡ ರವರಿಂದ ಮೇಲ್ಕಂಡ ಸ್ವತ್ತನ್ನು ಶ್ರೀಮತಿ ಸರ್ವಮಂಗಳ ಕೋಂ ಎಂ.ಎಸ್ ಧರ್ಮಪ್ಪ ಎಂಬುವವರು ದಿನಾಂಕ **16.12.1994** ರಂದು ಸಕಲೇಶಪುರ ಸಬ್ ರಿಜಿಸ್ಟ್ರಾರ್ ರವರ ಕಛೇರಿಯಲ್ಲಿ **1** ನೇ ಪುಸ್ತಕದ , **872** ನೇ ಸಂಪುಟದಲ್ಲಿ **205** ರಿಂದ **208** ನೇ ಪುಟಗಳಲ್ಲಿ **709/1994-95** ನೇ ನಂಬರಾಗಿ ರಿಜಿಸ್ಟರ್ ಆಗಿರುವ ಕ್ರಯಪತ್ರದ ಮೂಲಕ ಶುದ್ಧಕ್ರಯಕ್ಕೆ ಪಡೆದಿರುತ್ತಾರೆ ಅನಂತರ ಶ್ರೀಮತಿ ಸರ್ವಮಂಗಳ

ರವರಿಂದ ಮೇಲೆ ನಮೂದಿಸಿರುವ ಸ್ವತ್ತನ್ನು ಬಿ.ಪಿ. ಮಲ್ಲೇಗೌಡ ಆದ ನಾನು ದಿನಾಂಕಃ **22.03.2011** ರಂದು ಸಕಲೇಶಪುರ ಸಬ್ -ರಿಜಿಸ್ಟ್ರಾರ್ ರವರ ಕಚೇರಿಯಲ್ಲಿ **1** ನೇ ಪುಸ್ತಕದ ಸಿ.ಡಿ. ನಂ. ಎಸ್.ಎ.ಕೆ.ಡಿ **30** ರಲ್ಲಿ **1370/2010-11** ನೇ ನಂಬರಾಗಿ ರಿಜಿಸ್ಟ್ರಾಗಿರುವ ಕ್ರಯಪತ್ರದ ಮೂಾಲಕ ಶುದ್ದಕ್ರಯಕ್ಕೆ ಪಡೆದಿರುವ ನನ್ನ ಸ್ವಯಾರ್ಜಿತವಾದ ಜಮೀನಾಗಿದ್ದು, ಮೇಲೆ ನಮೂದಿಸಿರುವ ಕ್ರಯಪತ್ರದಂತೆ ಸದರಿ ಸ್ವತ್ತಿನ ಖಾತೆಯು ಮೂಗಲಿ ಗ್ರಾಮದ ಹಕ್ಕು ಬದಲಾವಣೆ ವಹಿ (ಮ್ಯುಟೇಷನ್ ರಿಜಿಸ್ಟರ್) ಸಂಖ್ಯೆ **35/2010-11** ರಲ್ಲಿ ಆದೇಶಿಸಿರುವಂತೆ ನನ್ನ ಹೆಸರಿಗೆ ವರ್ಗಾವಣೆ ಆಗಿರುತ್ತೆ. ಮೇಲೆ ನಮೂದಿಸಿರುವ ಸ್ವತ್ತನ್ನು ನಾನು ಕ್ರಯಕ್ಕೆ ಪಡೆದಾಗ ಸರ್ವೆ ನಂಬರ್ **177**/ಪೈಕಿ ಇದ್ದು ನಂತರ ಇದು ಪೋಡು ಮಾಡಲ್ಪಟ್ಟು ರೀ-ಸರ್ವೆ ನಂಬರ್ **177/1** ಐನು ವಿಸ್ತೀರ್ಣ **3** ಎಕರೆ **21** ಗುಂಟೆ ಮತ್ತು ಖರಾಬು **7** ಗುಂಟೆ ಆಗಿರುತ್ತೆ.

ಸಿ) ಷೆಡ್ಯೂಲ್ ನಲ್ಲಿ ನಮೂದಿಸಿರುವ ಮೂಗಲಿ ಗ್ರಾಮದ ಸರ್ವೆ ನಂಬರ್ **177/2** (ಹಳೆ ಸರ್ವೆ ನಂ. **177**/ಪೈಕಿ ಕಾಫಿ ಐನು ವಿಸ್ತೀರ್ಣ **3** ಎಕರೆ **21** ಗುಂಟೆ ಜಮೀನು ಬೆಳಗೋಡು ಗ್ರಾಮದ ಲೇಟ್ ಅಣ್ಣಪ್ಪಶೆಟ್ಟಿ ರವರ ಮಗ ರವೀಂದ್ರ ಕುಮಾರ್ ಎಂಬುವವರಿಗೆ ಈ ಹಿಂದೆ ಸೇರಿದ್ದು , ಮೇಲ್ಕಂಡ ಜಮೀನು ರವೀಂದ್ರಕುಮಾರ್‌ವರಿಗೆ ಸಕಲೇಶಪುರ ತಾಲ್ಲೂಕು ತಹಶೀಲ್ದಾರ್ ರವರ ಆದೇಶ ಸಂಖ್ಯೆ ಎಲ್.ಎನ್.ಡಿ **12/76-77** ದಿನಾಂಕ **29.10.1978** ರ ಆದೇಶದಂತೆ ಈ ಹಿಂದೆ ದರಖಾಸ್ತು ಮೂಲಕ ಮಂಜೂರಾಗಿರುತ್ತೆ. ನಂತರ ರವೀಂದ್ರ ಕುಮಾರ್ ರವರ ಪರವಾಗಿ ಅವರಿಂದ ಜನರಲ್ ಪವರ್ ಆಫ್ ಅಟಾರ್ನಿ ಪತ್ರದ ಮೂಲಕ ಅಧಿಕಾರ ಹೊಂದಿದ ಎಂ ಎಸ್ ಧರ್ಮಪ್ಪನವರಿಂದ ಮೇಲ್ಕಂಡ ಸ್ವತ್ತನ್ನು ಶ್ರೀಮತಿ ಸರ್ವಮಂಗಳ ಕೋಂ ಎಂ ಎಸ್ ಧರ್ಮಪ್ಪ ಎಂಬುವವರು ದಿನಾಂಕಃ **23.09.2000** ದಂದು ಸಕಲೇಶಪುರ ಸಬ್ ರಿಜಿಸ್ಟ್ರಾರ್ ರವರ ಕಚೇರಿಯಲ್ಲಿ **1** ನೇ ಪುಸ್ತಕದ **1024** ನೇ ಸಂಪುಟದಲ್ಲಿ **202** ರಿಂದ **210** ನೇ ಪುಟಗಳಲ್ಲಿ **625/2000-01** ನೇ ನಂಬರಾಗಿ ರಿಜಿಸ್ಟ್ರಾಗಿರುವ ಕ್ರಯಪತ್ರದ ಮೂಲಕ ಶುದ್ಧ ಕ್ರಯಕ್ಕೆ ಪಡೆದಿರುತ್ತಾರೆ ಅನಂತರ ಶ್ರೀಮತಿ ಸರ್ವಮಂಗಳರವರಿಂದ ಮೇಲೆ ನಮೂದಿಸಿರುವ ಸ್ವತ್ತನ್ನು ಬಿ ಪಿ ಮಲ್ಲೇಗೌಡ ಆದ ನಾನು ದಿಃ **21.02.2011** ರಂದು ಪತ್ರ ಬರೆದು ನಂತರ ದಿಃ **08.03.2011** ರಂದು ಸಕಲೇಶಪುರ ಸಬ್-ರಿಜಿಸ್ಟ್ರಾರ್ ರವರ ಕಚೇರಿಯಲ್ಲಿ **1** ನೇ ಪುಸ್ತಕದ ಸಿ.ಡಿ. ನಂ. ಎಸ್ ಎ ಕೆ ಡಿ **29** ರಲ್ಲಿ **1295/2010-11** ನಂಬರಾಗಿ ರಿಜಿಸ್ಟ್ರಾಗಿರುವ ಕ್ರಯ ಪತ್ರದ ಮೂಲಕ ಶುದ್ದ ಕ್ರಯಕ್ಕೆ ಪಡೆದಿರುವ ನನ್ನ ಸ್ವಯಾರ್ಜಿತವಾದ ಜಮೀನಾಗಿದ್ದು , ಮೇಲೆ ನಮೂದಿಸಿರುವ ಕ್ರಯಪತ್ರದಂತೆ ಸದರಿ ಸ್ವತ್ತಿನ ಖಾತೆಯು ಮೂಗಲಿ ಗ್ರಾಮದ ಹಕ್ಕುಬದಲಾವಣೆ ವಹಿ (ಮ್ಯುಟೇಷನ್ ರಿಜಿಸ್ಟರ್) ಸಂಖ್ಯೆ **26 /2010-11** ರಲ್ಲಿ ಆದೇಶಿಸಿರುವಂತೆ ನನ್ನ ಹೆಸರಿಗೆ ವರ್ಗಾವಣೆ ಆಗಿರುತ್ತೆ. ಮೇಲೆ ನಮೂದಿಸಿರುವ ಸ್ವತ್ತನ್ನು ನಾನು ಕ್ರಯಕ್ಕೆ ಪಡೆದಾಗ ಸರ್ವೆ ನಂ **177**/ಪೈಕಿ ಇದ್ದು ನಂತರ ಇದು ಪೋಡು ಮಾಡಲ್ಪಟ್ಟು ರೀ-ಸರ್ವೆ ನಂಬರ್ **177/2** ಐನು ವಿಸ್ತೀರ್ಣ **3** ಎಕರೆ **21** ಗುಂಟೆ ಮತ್ತು ಖರಾಬು **3** ಗುಂಟೆ ಆಗಿರುತ್ತೆ ಎಂದು ನಮೂದಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನಾನು ಯಾವುದೇ ಜಿ ಪಿ ಎ ಬರೆದುಕೊಟ್ಟಿಲ್ಲ ಎಂದು ಉತ್ತರಿಸುತ್ತಾರೆ. ಸರ್ವೆ ನಂ. **177/1** ಮಹಮ್ಮದ್ ಫಾಜಿಲ್ ರವರು **2** ನೇ

ಪ್ರತಿವಾದಿಗೆ ಜಿ ಪಿ ಎ ಮುಖಾಂತರ ಮಾರಾಟ ಮಾಡಿದ ಸ್ವತ್ತು ಮತ್ತು ಸರ್ವೆ ನಂ. **177/2** ಧರ್ಮಪ್ಪರವರು **2** ನೇ ಪ್ರತಿವಾದಿಗೆ ಜಿ ಪಿ ಎ ಮುಖಾಂತರ ಮಾರಾಟ ಮಾಡಿದ ಸ್ವತ್ತು ಎಂದರೆ ಸರಿಯಲ್ಲ. ನಿ.ಪಿ. **12** ರಂತೆ ನೋಟೀಸಿನ ಅಂಶಗಳನ್ನೊಳಗೊಂಡಂತೆ ಈ ದಾವೆಯನ್ನು ಸಲ್ಲಿಸಿರುತ್ತೇನೆ. ನೋಟೀಸ್ ನಲ್ಲಿ ಯಾವ ಸರ್ವೆ ನಂಬರ್ ಮತ್ತು ಪೋಡು ನಮೂದಿಸಿರುತ್ತೇನೆ ಎಂದು ಈಗ ನೆನಪಿಲ್ಲ. ನೋಟೀಸ್ ನಲ್ಲಿ ಚೆಕ್ಕುಬಂದಿ ನಮೂದಿಸಿದ ಬಗ್ಗೆ ನೆನಪಿಲ್ಲ. ನೋಟೀಸ್ ಕೊಡಲು ನಾನು ವಕೀಲರಿಗೆ ಮಾಹಿತಿ ಕೊಡುವಾಗ ಪಹಣಿ , ಮ್ಯುಟೇಷನ್ , ಕ್ರಯಪತ್ರ ಮತ್ತು ವರ್ಗಾವಣೆ ಪತ್ರ ಗಳನ್ನು ಕೊಟ್ಟಿರುತ್ತೇನೆ ನಿ.ಪಿ. **12** ರ ನೋಟೀಸ್ನಲ್ಲಿ **2** ರಿಂದ **4** ನೇ ಪ್ರತಿವಾದಿಯರಿಗೆ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲ ಎಂದು ಅಲ್ಲಗಳೆದಿಲ್ಲ ಎಂದರೆ ಸರಿ. ದಾಖಲಾತಿಗಳ ಬಗ್ಗೆ ನನ್ನ ಗಮನಕ್ಕೆ ಯಾವಾಗ ಬಂತು ಎಂದು ನೋಟೀಸ್ ನಲ್ಲಿ ಹೇಳಿರುವುದಿಲ್ಲ. ನಿ.ಪಿ. **12** ರಲ್ಲಿ ನಮೂದಿಸಿರುವ ಚೆಕ್ಕುಬಂದಿಯನ್ನು ನಾನು ಜಾಗದಲ್ಲಿ ಅನುಭವದಲ್ಲಿರುವಾಗ ಅದರ ಆಧಾರದ ಮೇಲೆ ಬರೆಯಿಸಿರುತ್ತೇನೆ. ನಿ.ಪಿ. **12** ರಲ್ಲಿ ನಮೂದಿಸಿದ ಚೆಕ್ಕುಬಂದಿ ನಂತರ ಯಾರು ಯಾರಿಗೆ ಬದಲಾವಣೆಯಾಗಿದೆ ಎಂದು ನನಗೆ ಹೇಳಲಾಗುವುದಿಲ್ಲ. ನಿ.ಪಿ. **12** ರಲ್ಲಿ ನಮೂದಿಸಿರುವ ಚೆಕ್ಕುಬಂದಿ **1994** ರಲ್ಲಿ ಇರುವ ಚೆಕ್ಕುಬಂದಿ ಎಂದರೆ ಸರಿ. ನಿ.ಪಿ. **12** ರ ಚೆಕ್ಕುಬಂದಿಯ ಪೂರ್ವದಲ್ಲಿ ಕ್ರಯದಾರರಾದ ಧರ್ಮಪ್ಪರವರ ಸ್ವತ್ತು ಎಂದು ನಮೂದಿಸಿದ್ದು ಸದರಿ ಸ್ವತ್ತನ್ನು ಮಹಮ್ಮದ್ ಫಾಜಿಲ್ ರವರು ಧರ್ಮಪ್ಪರವರಿಗೆ ಕೊಟ್ಟಂತಹ ಸ್ವತ್ತು ಎಂದರೆ ಸರಿ. ಪಶ್ಚಿಮದಲ್ಲಿ ನಂಜೇಗೌಡರ ಜಮೀನಿನ ಸರ್ವೆ ನಂಬರ್ ಹೇಳಲಾಗುವುದಿಲ್ಲ. ದಕ್ಷಿಣದಲ್ಲಿ ಮುಖ್ಬಿಲ್ ಅಹಮ್ಮದ್ ಮತ್ತು ಕೃಷ್ಣಶೆಟ್ಟಿರವರ ಜಮೀನಿನ ಸರ್ವೆ ನಂಬರ್ ಹೇಳಲಾಗುವುದಿಲ್ಲ. ನಾನು ದಿಃ **18.04.1994** ರಲ್ಲಿ ಸರ್ವೆ ನಂ. **177** ರ ಪೈಕಿ **3** ಎಕರೆ **21** ಗುಂಟೆ ಜಮೀನನ್ನು **2** ನೇ ಪ್ರತಿವಾದಿಗೆ ಕ್ರಯ ಕರಾರು ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು **2** ನೇ ಪ್ರತಿವಾದಿಯಿಂದ ಕ್ರಯ ಕರಾರಿನ **38** ಸಾವಿರ ರೂ. ಗಳನ್ನು ಕರ್ನಾಟಕ ಬ್ಯಾಂಕ್ ನ ಚೆಕ್ ಮುಖಾಂತರ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾನು ಅವರಲ್ಲಿ ಕೆಲಸಕ್ಕೆ ಇದ್ದಾಗ ಸಂಬಳದಲ್ಲಿ ಉಳಿತಾಯ ಮಾಡಿದ್ದು , ಎಲ್ಲಾ ಸೇರಿಸಿ ಉಳಿದ ಹಣಕ್ಕೆ ಚೆಕ್ಕನ್ನು ಕೊಟ್ಟಿರುತ್ತಾರೆ ಎಂದು ಉತ್ತರಿಸುತ್ತಾರೆ. ಪ್ರತಿವಾದಿಯರು ಮರುಉತ್ತರ ನೋಟೀಸ್ ನಲ್ಲಿ ಕರಾರು ಮಾಡಿಕೊಟ್ಟ ಬಗ್ಗೆ , ಜಿ ಪಿ ಎ ಮಾಡಿಕೊಟ್ಟ ಬಗ್ಗೆ ಮತ್ತು ಪತ್ರಿಕೆಯ ಪ್ರಕಟಣೆಯ ಬಗ್ಗೆ ತಿಳಿಸಿರುತ್ತಾರೆ ಎಂದರೆ ಸರಿ. **2** ನೇ ಪ್ರತಿವಾದಿ **3** ನೇ ಪ್ರತಿವಾದಿಗೆ ಮಾರಾಟ ಮಾಡಿದ ಕ್ರಯಪತ್ರ ಸಿಗದ ಕಾರಣ ಹಾಜರುಪಡಿಸಿಲ್ಲ ನಾನು ದಾವೆಯಲ್ಲಿ ಕ್ರಯಪತ್ರ ಸಂಖ್ಯೆ **1295/2010-11** ನ್ನು **3** ನೇ ಪ್ರತಿವಾದಿ ನನಗೆ ಹೇಳಿದ್ದರಿಂದ ನಮೂದಿಸಿರುತ್ತೇನೆ. ನಾನು **3** ನೇ ಪ್ರತಿವಾದಿ ಮನೆಗೆ ಆ ಜಾಗ ನನ್ನದಲ್ಲ ಎಂದು ನನಗೆ ಗೊತ್ತಾದ ಮೇಲೆ ಅವರನ್ನು ವಿಚಾರಿಸಲು ಹೋದಾಗ ಆ ಕ್ರಯಪತ್ರದ ಬಗ್ಗೆ ಹೇಳಿರುತ್ತಾರೆ ನಾನು **3** ನೇ ಪ್ರತಿವಾದಿಯನ್ನು ಯಾವ ವರ್ಷ ಮತ್ತು ಯಾವ ತಿಂಗಳಿನಲ್ಲಿ ಭೇಟಿ ಮಾಡಲು ಹೋಗಿರುತ್ತೇನೆ ಎಂದು ನೆನಪಿಲ್ಲ. ನಾನು ಅವರು ವಾಸ ಮಾಡುತ್ತಿರುವ ಮನೆಯ ಪಂಚಾಯ್ತಿ ಖಾತೆ ನಂಬರನ್ನು

ತೆಗೆದುಕೊಂಡಿರುವುದಿಲ್ಲ. ನಾನು 4 ನೇ ಪ್ರತಿವಾದಿಗೆ ಸಂಬಂಧಿಸಿದ ಮನೆಯ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ. 6 ನ್ನು ನಾನು ದಿಃ 26.07.2015 ರಂದು ತೆಗೆದುಕೊಂಡಿರುತ್ತೇನೆ ಎಂದರೆ ಸರಿ. ನಿ.ಪಿ. 7 ರಿಂದ 10 ನ್ನು ದಿಃ 16.03.2015 ರಂದು ಮುದ್ರಿಸಿರುತ್ತಾರೆ ಎಂದರೆ ಸರಿ. ನಾನು ದಾವೆಯಲ್ಲಿ ವ್ಯಾಜ್ಯ ಕಾರಣ ಏಪ್ರಿಲ್ 2015 ರಂದು ಪ್ರಾರಂಭವಾಗಿದೆ ಎಂದು ಹೇಳಿದ್ದು , ನಿ.ಪಿ. 7 ರಿಂದ 10 ದಾಖಲೆಗಳು ಅದಕ್ಕಿಂತ ಪೂರ್ವದಲ್ಲಿ ತೆಗೆದುಕೊಂಡ ದಾಖಲೆಗಳು ಎಂದರೆ ಸಾಕ್ಷಿಯು ನಾನು ವಕೀಲರನ್ನು ಭೇಟಿಯಾಗಿ ಅವರು ಹೇಳಿದ ಎಲ್ಲಾ ದಾಖಲಾತಿಗಳನ್ನು ತೆಗೆದುಕೊಳ್ಳಲು ಕಾಲಾವಕಾಶ ಹೋಗಿದೆ ಎಂದು ಉತ್ತರಿಸುತ್ತಾರೆ. ನೋಟೀಸ್‌ನಲ್ಲಿ ನಾನು ನನ್ನ ಮನೆ ಮತ್ತು ಪೂರ್ತಿ ಜಾಗಕ್ಕೆ ಸಂಬಂಧಿಸಿದಂತೆ ನಮೂದಿಸಿ ನೋಟೀಸ್ ಕೊಟ್ಟಿರುತ್ತೇನೆ. ಮನೆ ಮತ್ತು ಪೂರ್ತಿ ಜಾಗ ಅವರ ಸ್ವಾಧೀನದಲ್ಲಿದ್ದು , ಅವರು ನನ್ನನ್ನು ಒಳಗೆ ಹೋಗಲು ಬಿಟ್ಟಿರುವುದಿಲ್ಲ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು , ನೀಡಿ ಮುಂದೂಡಲಾಯಿತು.

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಿವಿಲ್ ನ್ಯಾಯಾಧೀಶರು